



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسۡمِ اللّٰهِ الرَّحۡمٰنِ الرَّحِيۡمِ

1. ಯಾಸೀನ್. — يٰسٓ ۚ ﴿١﴾

2. ಯುಕ್ತಿಪೂರ್ಣವಾದ ಕುರ್‌ಆನಿನಾಣೆ- — وَالۡقُرۡاٰنِ الۡحَكِيۡمِۙ ﴿٢﴾

3. ನಿಶ್ಚಯವಾಗಿಯೂ ನೀವು ಅಲ್ಲಾಹನ ಸಂದೇಶವಾಹಕರಲ್ಲಾಗಿರುತ್ತೀರಿ. — اِنَّكَ لَمِنَ الۡمُرۡسَلِيۡنَۙ ﴿٣﴾

4. ನೇರ ಮಾರ್ಗದಲ್ಲಿದ್ದೀರಿ. — عَلٰى صِرَاطٍ مُّسۡتَقِيۡمٍؕ ﴿٤﴾

5. (ಈ ಕುರ್‌ಆನ್) ಅತ್ಯಂತ ಪ್ರಬಲನೂ ಕರುಣಾನಿಧಿಯೂ ಆದವನಿಂದ ಅವತೀರ್ಣ ಗೊಂಡುದಾಗಿದೆ- — تَنۡزِيۡلَ الۡعَزِيۡزِ الرَّحِيۡمِۙ ﴿٥﴾

6. (ಇದು) ಪೂರ್ವಿಕರು ಎಚ್ಚರಿಸಲ್ಪಟ್ಟಿರದ ಕಾರಣದಿಂದ ಪ್ರಜ್ಞಾಹೀನರಾಗಿ ಬಿಟ್ಟಿರುವಂತಹ ಒಂದು ಜನಾಂಗಕ್ಕೆ ನೀವು ಎಚ್ಚರಿಕೆ ಕೊಡುವಂತಾಗಲು. — لِتُنۡذِرَ قَوۡمًا مَّاۤ اُنۡذِرَ اٰبَآؤُهُمۡ فَهُمۡ غٰفِلُوۡنَ ﴿٦﴾

7. ಇವರಲ್ಲಿ ಹೆಚ್ಚಿನವರು (ಯಾತನೆಯ) ತೀರ್ಪಿಗೆ ಅರ್ಹರಾಗಿ ಬಿಟ್ಟಿದ್ದಾರೆ. ಆದುದರಿಂದಲೇ ಅವರು ವಿಶ್ವಾಸವಿರಿಸುವುದಿಲ್ಲ.[1] — لَقَدۡ حَقَّ الۡقَوۡلُ عَلٰٓى اَكۡثَرِهِمۡ فَهُمۡ لَا يُؤۡمِنُوۡنَ ﴿٧﴾

8. ನಾವು ಅವರ ಕೊರಳುಗಳಿಗೆ ಕಂಠ ಕಡಗಗಳನ್ನು ಹಾಕಿರುತ್ತೇವೆ. — اِنَّا جَعَلۡنَا فِىۡۤ اَعۡنَاقِهِمۡ اَغۡلٰلًا فَهِىَ

1. ಪ್ರವಾದಿವರ್ಯರ(ಸ) ಬೋಧನೆಗೆ ಪ್ರತಿಯಾಗಿ ಹಟ ಮತ್ತು ಮೊಂಡುಪ್ರವೃತ್ತಿ ತಳೆಯುತ್ತಿದ್ದ ಮತ್ತು ಅವರ ಮಾತನ್ನು ಒಪ್ಪುವುದಿಲ್ಲವೆಂಬ ನಿರ್ಧಾರ ಕೈಗೊಂಡಿದ್ದ ವ್ಯಕ್ತಿಗಳ ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ. "ಇವರು ನಿಶ್ಚಿತ ಯಾತನೆಗೆ ಬಾಧ್ಯಸ್ಥರಾಗಿ ಮಾರ್ಪಟ್ಟಿದ್ದಾರೆ. ಆದ್ದರಿಂದ ಇವರು ವಿಶ್ವಾಸವಿಡುವುದಿಲ್ಲ" ಎಂದು ಅವರ ಬಗ್ಗೆ ಹೇಳಲಾಗಿದೆ.

ಅವುಗಳಿಂದಾಗಿ ಅವರು ಗಲ್ಲದ ವರೆಗೆ ಬಿಗಿಯಲ್ಪಟ್ಟಿದ್ದಾರೆ. ಆದುದರಿಂದಲೇ ಅವರು ತಲೆಯನ್ನೆತ್ತಿಕೊಂಡು ನಿಂತಿದ್ದಾರೆ.[2]

إلى الأذقان فهم مقمحون ۝٨

9. ನಾವು ಒಂದು ಗೋಡೆಯನ್ನು ಅವರ ಮುಂದೆಯೂ ಒಂದು ಗೋಡೆಯನ್ನು ಅವರ ಹಿಂದೆಯೂ ನಿಲ್ಲಿಸಿದ್ದೇವೆ. ಹೀಗೆ ನಾವು ಅವರನ್ನು ಮುಚ್ಚಿ ಬಿಟ್ಟಿದ್ದೇವೆ. ಅವರಿಗೆ ಈಗ ಏನೂ ತೋಚು ವುದಿಲ್ಲ.[3]

وجعلنا من بين أيديهم سدا ومن خلفهم سدا فأغشيناهم فهم لا يبصرون ۝٩

10. ಅವರಿಗೆ ನೀವು ಎಚ್ಚರಿಕೆ ಕೊಟ್ಟರೂ ಕೊಡದಿದ್ದರೂ ಸರಿಯೇ. ಅವರು ವಿಶ್ವಾಸ ಸ್ವೀಕರಿಸುವವರಲ್ಲ.

وسواء عليهم ءأنذرتهم أم لم تنذرهم لا يؤمنون ۝١٠

11. ಉಪದೇಶವನ್ನು ಅನುಸರಿಸುವವನಿಗೆ ಮತ್ತು ದಯಾಮಯನಾದ ದೇವನನ್ನು ಪ್ರತ್ಯಕ್ಷ ನೋಡದೆಯೇ ಭಯಪಡುವವನಿಗೆ ಮಾತ್ರ ನೀವು ಎಚ್ಚರಿಕೆ ನೀಡಬಲ್ಲಿರಿ. ಅವನಿಗೆ ಕ್ಷಮೆ ಮತ್ತು ಸನ್ಮಾನ್ಯ ಪ್ರತಿಫಲದ ಶುಭವಾರ್ತೆ ನೀಡಿರಿ.

إنما تنذر من اتبع الذكر وخشي الرحمن بالغيب فبشره بمغفرة وأجر كريم ۝١١

12. ನಿಶ್ಚಯವಾಗಿಯೂ ನಾವು ಒಂದು ದಿನ ಮೃತರನ್ನು ಜೀವಂತ ಗೊಳಿಸಲಿರುವೆವು. ಅವರು ಮಾಡಿದ ಕರ್ಮಗಳನ್ನೂ ಬಿಟ್ಟು ಹೋಗಿರುವ ಕುರುಹುಗಳನ್ನೂ ನಾವು ಬರೆಯುತ್ತಿದ್ದೇವೆ. ನಾವು ಎಲ್ಲಾ ವಿಷಯಗಳನ್ನು ಒಂದು ತೆರೆದ ಗ್ರಂಥದಲ್ಲಿ ಲಿಖಿತಗೊಳಿಸಿ ಬಿಟ್ಟಿದ್ದೇವೆ.

إنا نحن نحي الموتى ونكتب ما قدموا وآثارهم وكل شيء أحصيناه في إمام مبين ۝١٢

13. ಇವರಿಗೆ ದೃಷ್ಟಾಂತಕ್ಕಾಗಿ ಸಂದೇಶವಾಹಕರು ಬಂದಿದ್ದ ಆ ನಾಡಿನವರ ವೃತ್ತಾಂತವನ್ನು ತಿಳಿಸಿರಿ.

واضرب لهم مثلا أصحب القرية إذ جاءها المرسلون ۝١٣

14. ನಾವು ಅವರ ಕಡೆಗೆ ಇಬ್ಬರು ಸಂದೇಶವಾಹಕರನ್ನು ರವಾನಿಸಿದೆವು. ಅವರು ಇಬ್ಬರನ್ನೂ ಸುಳ್ಳಾಗಿಸಿಬಿಟ್ಟರು. ಅನಂತರ ನಾವು ಸಹಾಯಕ್ಕಾಗಿ ಮೂರನೆಯವನನ್ನು ಕಳುಹಿಸಿದೆವು. ಅವರೆಲ್ಲರೂ "ನಾವು ನಿಮ್ಮ ಕಡೆಗೆ ಸಂದೇಶವಾಹಕರಾಗಿ ಕಳುಹಿಸಲ್ಪಟ್ಟಿದ್ದೇವೆ" ಎಂದರು.

إذ أرسلنا إليهم اثنين فكذبوهما فعززنا بثالث فقالوا إنا إليكم مرسلون ۝١٤

2. 'ಕೊರಳ ಪಟ್ಟಿ'ಯೆಂದರೆ ಸತ್ಯ ಸ್ವೀಕರಿಸಲು ಅವರ ಪಾಲಿಗೆ ಅಡ್ಡಿಯಾಗುತ್ತಿದ್ದ ಹಟಸಾಧನೆ. "ಗಲ್ಲದ ವರೆಗೆ ಬಿಗಿಯಲ್ಪಟ್ಟಿದ್ದಾರೆ" ಮತ್ತು "ತಲೆ ಎತ್ತಿ ನಿಂತಿದ್ದಾರೆ" ಎಂದರೆ ದುರಹಂಕಾರದಿಂದಾಗಿ ಅವರು ಕತ್ತನ್ನು ಸೆಟೆಯುತ್ತಿದ್ದರು ಎಂದಾಗಿದೆ.

3. "ಒಂದು ಗೋಡೆಯನ್ನು ಅವರ ಮುಂದೆಯೂ ಮತ್ತೊಂದು ಗೋಡೆಯನ್ನು ಅವರ ಹಿಂದೆಯೂ ನಿಲ್ಲಿಸಿದ್ದೇವೆ" ಎಂದರೆ ತಮ್ಮ ದುರಹಂಕಾರದಿಂದಾಗಿ ಸಹಜವೆಂಬಂತೆ ಅವರು ಹಿಂದಿನ ಇತಿಹಾಸದಿಂದ ಪಾಠಕಲಿಯುವುದಾಗಲಿ, ಭವಿಷ್ಯದ ಪರಿಣಾಮದ ಬಗ್ಗೆ ಆಲೋಚಿಸುವುದಾಗಲಿ ಮಾಡುವುದಿಲ್ಲ. ಅವರ ಪೂರ್ವಗ್ರಹಗಳು ನಾಲ್ಕೂ ನಿಟ್ಟಿನಿಂದ ಅವರನ್ನು ಆವರಿಸಿಕೊಂಡಿವೆ. ಅವರ ತಪ್ಪು ಕಲ್ಪನೆಗಳಿಂದಾಗಿ ಅವರ ಕಣ್ಣುಗಳ ಮೇಲೆ ಪರದೆ ಬಿದ್ದಿದೆ. ಆದ್ದರಿಂದ ಪ್ರತಿಯೊಬ್ಬ ಸತ್‌ಸ್ವಭಾವದ ನಿಷ್ಪಕ್ಷಮತಿ ವ್ಯಕ್ತಿಗೂ ಗೋಚರಿಸುವಂತಹ ಸುಸ್ಪಷ್ಟವಾದ ವಾಸ್ತವಿಕತೆಗಳು ಅವರಿಗೆ ಕಾಣುವುದಿಲ್ಲ.

15. ನಾಡಿನವರು, "ನೀವು ನಮ್ಮಂತಹ ಮನುಷ್ಯರಲ್ಲದೆ ಇನ್ನೇನೂ ಅಲ್ಲ. ದಯಾಮಯನಾದ ದೇವನು ಏನನ್ನೂ ಇಳಿಸಿಲ್ಲ. ನೀವು ಕೇವಲ ಸುಳ್ಳಾಡುತ್ತಿರುವಿರಿ" ಎಂದರು.

قَالُوا مَا أَنتُمْ إِلَّا بَشَرٌ مِّثْلُنَا وَمَا أَنزَلَ الرَّحْمَٰنُ مِن شَيْءٍ إِنْ أَنتُمْ إِلَّا تَكْذِبُونَ ﴿١٥﴾

16. "ನಾವು ಖಂಡಿತವಾಗಿಯೂ ನಿಮ್ಮ ಕಡೆಗೆ ಸಂದೇಶವಾಹಕರಾಗಿ ಕಳುಹಿಸಲ್ಪಟ್ಟಿದ್ದೇವೆಂಬುದನ್ನು ನಮ್ಮ ಪ್ರಭು ಅರಿತಿರುತ್ತಾನೆ.

قَالُوا رَبُّنَا يَعْلَمُ إِنَّا إِلَيْكُمْ لَمُرْسَلُونَ ﴿١٦﴾

17. ಸುಸ್ಪಷ್ಟ ಸಂದೇಶವನ್ನು ತಲುಪಿಸುವ ಹೊರತು ಇನ್ನಾವ ಹೊಣೆಯೂ ನಮ್ಮ ಮೇಲಿಲ್ಲ" ಎಂದು ಸಂದೇಶವಾಹಕರು ಹೇಳಿದರು.

وَمَا عَلَيْنَا إِلَّا الْبَلَاغُ الْمُبِينُ ﴿١٧﴾

18. ನಾಡಿನವರು ಹೇಳತೊಡಗಿದರು- "ನಾವಂತು ನಿಮ್ಮನ್ನು ನಮ್ಮ ಪಾಲಿಗೆ ಅಪಶಕುನವೆಂದು ತಿಳಿಯುತ್ತೇವೆ. ನೀವು ಈ ಕಾರ್ಯವನ್ನು ಕೈ ಬಿಡದಿದ್ದರೆ, ನಾವು ನಿಮ್ಮನ್ನು ಕಲ್ಲೆಸೆದು ಕೊಲ್ಲುವೆವು ಮತ್ತು ನೀವು ನಮ್ಮಿಂದ ವೇದನಾಯುಕ್ತ ಶಿಕ್ಷೆ ಪಡೆಯುವಿರಿ."

قَالُوا إِنَّا تَطَيَّرْنَا بِكُمْ ۖ لَئِن لَّمْ تَنتَهُوا لَنَرْجُمَنَّكُمْ وَلَيَمَسَّنَّكُم مِّنَّا عَذَابٌ أَلِيمٌ ﴿١٨﴾

19. (ಅದಕ್ಕೆ) ಸಂದೇಶವಾಹಕರು- "ನಿಮ್ಮ ಅಪಶಕುನವಂತು ನಿಮ್ಮಲ್ಲೇ ಇದೆ. ನಿಮಗೆ ಉಪದೇಶ ಮಾಡಿದುದಕ್ಕಾಗಿ ನೀವು ಹೀಗೆ ಹೇಳುತ್ತಿರುವಿರಾ? ವಾಸ್ತವದಲ್ಲಿ ನೀವು ಹದಮೀರಿದವರಾಗಿರುತ್ತೀರಿ" ಎಂದು ಉತ್ತರ ಕೊಟ್ಟರು.

قَالُوا طَائِرُكُم مَّعَكُمْ ۚ أَئِن ذُكِّرْتُم ۚ بَلْ أَنتُمْ قَوْمٌ مُّسْرِفُونَ ﴿١٩﴾

20. ಅಷ್ಟರಲ್ಲಿ ಪಟ್ಟಣದ ದೂರದ ಮೂಲೆಯಿಂದ ಒಬ್ಬನು ಓಡುತ್ತಾ ಬಂದು ಹೀಗೆಂದನು, "ಓ ನನ್ನ ಜನಾಂಗದವರೇ! ಸಂದೇಶ ವಾಹಕರನ್ನು ಅನುಸರಿಸಿರಿ-

وَجَاءَ مِنْ أَقْصَى الْمَدِينَةِ رَجُلٌ يَسْعَىٰ قَالَ يَا قَوْمِ اتَّبِعُوا الْمُرْسَلِينَ ﴿٢٠﴾

21. ನಿಮ್ಮಿಂದ ಯಾವ ಪ್ರತಿಫಲವನ್ನೂ ಬಯಸದ ಹಾಗೂ ಸ್ವತಃ ನೇರ ಮಾರ್ಗದಲ್ಲಿ ಇರುವ ಇವರನ್ನು ಅನುಸರಿಸಿರಿ-

اتَّبِعُوا مَن لَّا يَسْأَلُكُمْ أَجْرًا وَهُم مُّهْتَدُونَ ﴿٢١﴾

22. *ಯಾರು ನನ್ನನ್ನು ಸೃಷ್ಟಿಸಿರುವನೋ ಮತ್ತು ಯಾರ ಕಡೆಗೆ ನೀವೆಲ್ಲರೂ ಮರಳಿ ಹೋಗಲಿಕ್ಕಿದೆಯೋ ಅವನ ದಾಸ್ಯ-ಆರಾಧನೆಯನ್ನು ನಾನೇಕೆ ಮಾಡಬಾರದು?

وَمَا لِيَ لَا أَعْبُدُ الَّذِي فَطَرَنِي وَإِلَيْهِ تُرْجَعُونَ ﴿٢٢﴾

*ಇಲ್ಲಿಂದ **23ನೆಯ ಕಾಂಡ ಆರಂಭ.**

23. ನಾನು ಅವನನ್ನು ಬಿಟ್ಟು ಇತರರನ್ನು ಆರಾಧ್ಯರಾಗಿ ಮಾಡಿ ಕೊಳ್ಳಬೇಕೇ? ವಸ್ತುತಃ ದಯಾಮಯನಾದ ದೇವನು ನನಗೇನಾದರೂ ಹಾನಿಯನ್ನುಂಟು ಮಾಡಲಿಚ್ಛಿಸಿದರೆ ಅವರ ಶಿಫಾರಸು ನನಗೇನೂ ಫಲಕಾರಿಯಾಗದು ಮತ್ತು ಅವರು ನನ್ನನ್ನು ಬಿಡುಗಡೆಗೊಳಿಸ ಲಾರರು.

ءَاَتَّخِذُ مِنْ دُوْنِهٖۤ اٰلِهَةً اِنْ يُّرِدْنِ
الرَّحْمٰنُ بِضُرٍّ لَّا تُغْنِ عَنِّيْ شَفَاعَتُهُمْ
شَيْـًٔا وَّلَا يُنْقِذُوْنِ ۚ ﴿٢٣﴾

24. ಹಾಗೆ ಮಾಡಿದರೆ ನಾನು ಸ್ಪಷ್ಟ ಪಥಭ್ರಷ್ಟತೆಯಲ್ಲಿ ಸಿಲುಕಿ ಬಿಡುವೆನು.

اِنِّيْۤ اِذًا لَّفِيْ ضَلٰلٍ مُّبِيْنٍ ﴿٢٤﴾

25. ನಾನಂತು ನಿಮ್ಮ ಪ್ರಭುವಿನ ಮೇಲೆ ವಿಶ್ವಾಸವಿರಿಸಿದೆನು. ನೀವೂ ನನ್ನ ಮಾತನ್ನು ಒಪ್ಪಿಕೊಳ್ಳಿರಿ".

اِنِّيْۤ اٰمَنْتُ بِرَبِّكُمْ فَاسْمَعُوْنِ ؕ ﴿٢٥﴾

26-27. (ಕೊನೆಗೆ ಅವರು ಅವನನ್ನು ವಧಿಸಿ ಬಿಟ್ಟರು) "ಸ್ವರ್ಗದಲ್ಲಿ ಪ್ರವೇಶಿಸು" ಎಂದು ಆ ವ್ಯಕ್ತಿಯೊಡನೆ ಹೇಳಲಾಯಿತು. ಅವನು, "ಅಯ್ಯೋ! ನನ್ನ ಪ್ರಭು ಯಾವುದಕ್ಕಾಗಿ ನನ್ನನ್ನು ಕ್ಷಮಿಸಿದನು ಮತ್ತು ನನ್ನನ್ನು ಸನ್ಮಾನ್ಯ ಜನರಲ್ಲಿ ಸೇರಿಸಿದನೆಂಬುದು ನನ್ನ ಜನಾಂಗಕ್ಕೆ ತಿಳಿದಿರುತ್ತಿದ್ದರೆ!" ಎಂದನು.

قِيْلَ ادْخُلِ الْجَنَّةَ ؕ قَالَ يٰلَيْتَ قَوْمِيْ
يَعْلَمُوْنَ ﴿٢٦﴾ بِمَا غَفَرَ لِيْ رَبِّيْ
وَجَعَلَنِيْ مِنَ الْمُكْرَمِيْنَ ﴿٢٧﴾

28. ಅನಂತರ ನಾವು ಅವನ ಜನಾಂಗದ ಮೇಲೆ ಆಕಾಶದಿಂದ ಸೈನ್ಯವ ನ್ನೇನೂ ಇಳಿಸಲಿಲ್ಲ. ನಮಗೆ ಸೇನೆಯನ್ನು ಕಳುಹಿಸುವ ಅಗತ್ಯವೂ ಇರಲಿಲ್ಲ.

وَمَاۤ اَنْزَلْنَا عَلٰى قَوْمِهٖ مِنْۢ بَعْدِهٖ
مِنْ جُنْدٍ مِّنَ السَّمَآءِ وَمَا كُنَّا مُنْزِلِيْنَ ﴿٢٨﴾

29. ಕೇವಲ ಒಂದು ಘನಸ್ಫೋಟವಾಯಿತು ಮತ್ತು ಅವರೆಲ್ಲರೂ ಹಠಾತ್ತನೆ ನಂದಿ ಹೋದರು.

اِنْ كَانَتْ اِلَّا صَيْحَةً وَّاحِدَةً فَاِذَا
هُمْ خٰمِدُوْنَ ﴿٢٩﴾

30. ಅಯ್ಯೋ; ದಾಸರ ಅವಸ್ಥೆಯೇ! ಅವರ ಬಳಿಗೆ ಯಾವ ಸಂದೇಶವಾಹಕನು ಬಂದರೂ ಅವರು ಅವನ ಅಪಹಾಸ್ಯವನ್ನೇ ಮಾಡುತ್ತಿದ್ದರು.

يٰحَسْرَةً عَلَى الْعِبَادِ ۚ مَا يَاْتِيْهِمْ مِّنْ
رَّسُوْلٍ اِلَّا كَانُوْا بِهٖ يَسْتَهْزِءُوْنَ ﴿٣٠﴾

31. ನಾವು ಅವರಿಗಿಂತ ಮುಂಚೆ ಎಷ್ಟೋ ಜನಾಂಗಗಳನ್ನು ನಾಶ ಗೊಳಿಸಿದ್ದನ್ನೂ ಅನಂತರ ಅವು ಎಂದೂ ಮರಳಿ ಅವರ ಕಡೆಗೆ ಬಾರದಿದ್ದುದನ್ನೂ ಅವರು ಕಂಡಿಲ್ಲವೇ?

اَلَمْ يَرَوْا كَمْ اَهْلَكْنَا قَبْلَهُمْ مِّنَ
الْقُرُوْنِ اَنَّهُمْ اِلَيْهِمْ لَا يَرْجِعُوْنَ ؕ ﴿٣١﴾

32. ಇವರೆಲ್ಲರನ್ನೂ ಒಂದು ದಿನ ನಮ್ಮ ಮುಂದೆ ಹಾಜರು ಪಡಿಸಲಿಕ್ಕಿದೆ.

وَاِنْ كُلٌّ لَّمَّا جَمِيْعٌ لَّدَيْنَا مُحْضَرُوْنَ ؑ ﴿٣٢﴾

33. ನಿರ್ಜೀವ ಭೂಮಿಯು ಇವರಿಗೊಂದು ನಿದರ್ಶನವಾಗಿದೆ. ನಾವು ಅದಕ್ಕೆ ಜೀವದಾನ ಮಾಡಿದೆವು ಮತ್ತು ಅದರಿಂದ ಧಾನ್ಯಗಳನ್ನು ಹೊರತಂದೆವು, ಅದನ್ನು ಇವರು ಉಣ್ಣುತ್ತಾರೆ.

وَآيَةٌ لَّهُمُ الْأَرْضُ الْمَيْتَةُ أَحْيَيْنَاهَا
وَأَخْرَجْنَا مِنْهَا حَبًّا فَمِنْهُ يَأْكُلُونَ ٣٣

34. ನಾವು ಅದರಲ್ಲಿ ಖರ್ಜೂರ ಮತ್ತು ದ್ರಾಕ್ಷಿಗಳ ತೋಟಗಳನ್ನುಂಟು ಮಾಡಿದೆವು ಮತ್ತು ಅದರೊಳಗಿಂದ ಚಿಲುಮೆಗಳನ್ನು ಹೊಮ್ಮಿಸಿದೆವು.

وَجَعَلْنَا فِيهَا جَنَّاتٍ مِّن نَّخِيلٍ وَأَعْنَابٍ
وَفَجَّرْنَا فِيهَا مِنَ الْعُيُونِ ٣٤

35. (ಇದು) ಇವರು ಅದರ ಫಲವನ್ನುಣ್ಣಲಿಕ್ಕಾಗಿ. ಇವೆಲ್ಲ ಇವರ ಸ್ವಂತ ಕೈಗಳಿಂದ ನಿರ್ಮಿತವಾದುದಲ್ಲ. ಹಾಗಿದ್ದೂ ಇವರು ಕೃತಜ್ಞರಾಗುವುದಿಲ್ಲವೇ?

لِيَأْكُلُوا مِن ثَمَرِهِ وَمَا عَمِلَتْهُ
أَيْدِيهِمْ ۖ أَفَلَا يَشْكُرُونَ ٣٥

36. ಎಲ್ಲ ತರದ ಜೋಡಿಗಳನ್ನು- ಅವುಗಳು ಭೂಮಿಯ ವನಸ್ಪತಿ ಗಳಲ್ಲಿರಲಿ, ಸ್ವತಃ ಇವರ (ಮನುಷ್ಯರ) ವರ್ಗದಲ್ಲಿರಲಿ- ಅಥವಾ ಇವರಿಗೆ ತಿಳಿದೇ ಇಲ್ಲದಂತಹ ವಸ್ತುಗಳಲ್ಲಿರಲಿ- ಸೃಷ್ಟಿಸಿದವನು ಪರಮ ಪಾವನನು.

سُبْحَانَ الَّذِي خَلَقَ الْأَزْوَاجَ كُلَّهَا
مِمَّا تُنبِتُ الْأَرْضُ وَمِنْ أَنفُسِهِمْ
وَمِمَّا لَا يَعْلَمُونَ ٣٦

37. ಇವರಿಗೆ ರಾತ್ರಿಯು ಇನ್ನೊಂದು ನಿದರ್ಶನವಾಗಿದೆ. ನಾವು ಅದರ ಮೇಲಿಂದ ಹಗಲನ್ನು ಸರಿಸಿಬಿಡುತ್ತೇವೆ. ಆಗ ಇವರ ಮೇಲೆ ಕತ್ತಲೆ ಕವಿಯುತ್ತದೆ-

وَآيَةٌ لَّهُمُ اللَّيْلُ نَسْلَخُ مِنْهُ النَّهَارَ
فَإِذَا هُم مُّظْلِمُونَ ٣٧

38. ಮತ್ತು ಸೂರ್ಯನು ತನ್ನ ಸ್ಥಾನದ ಕಡೆಗೆ ಚಲಿಸುತ್ತಿದ್ದಾನೆ. ಪ್ರಬಲನೂ ಸರ್ವಜ್ಞನೂ ಆದವನ ನಿರ್ಣಯವಿದು-

وَالشَّمْسُ تَجْرِي لِمُسْتَقَرٍّ لَّهَا ۚ
ذَٰلِكَ تَقْدِيرُ الْعَزِيزِ الْعَلِيمِ ٣٨

39. ಮತ್ತು ಚಂದ್ರ - ಅದಕ್ಕೆ ನಾವು ಘಟ್ಟಗಳನ್ನು ನಿಶ್ಚಯಿಸಿಕೊಟ್ಟಿದ್ದು, ಅವುಗಳನ್ನು ಹಾದು ಹೋಗುತ್ತಾ ಕೊನೆಗೆ ಅದು ಖರ್ಜೂರದ ಒಣಗೆಲ್ಲಿನಂತಾಗಿ ಬಿಡುತ್ತದೆ.

وَالْقَمَرَ قَدَّرْنَاهُ مَنَازِلَ حَتَّىٰ عَادَ
كَالْعُرْجُونِ الْقَدِيمِ ٣٩

40. ಚಂದ್ರನನ್ನು ಹಿಡಿಯಲು ಸೂರ್ಯನಿಂದಾಗದು ಮತ್ತು ರಾತ್ರಿಯು ಹಗಲನ್ನು ಮೀರಿ ಹೋಗಲಾರದು. ಎಲ್ಲವೂ ಒಂದೊಂದು ಕಕ್ಷೆಯಲ್ಲಿ ತೇಲುತ್ತಿವೆ.

لَا الشَّمْسُ يَنبَغِي لَهَا أَن تُدْرِكَ
الْقَمَرَ وَلَا اللَّيْلُ سَابِقُ النَّهَارِ ۚ
وَكُلٌّ فِي فَلَكٍ يَسْبَحُونَ ٤٠

41. ನಾವು ತುಂಬಿದ ನಾವೆಯಲ್ಲಿ ಇವರ ಸಂತತಿಯನ್ನು ಸವಾರಿ ಮಾಡಿಸಿದುದೂ ಇವರಿಗೊಂದು ನಿದರ್ಶನವಾಗಿದೆ.[4]

وَآيَةٌ لَّهُمْ أَنَّا حَمَلْنَا ذُرِّيَّتَهُمْ
فِي الْفُلْكِ الْمَشْحُونِ ٤١

4. ನಾವೆ ಎಂದರೆ ಹ. ನೂಹ್‌ರ(ಅ) ನಾವೆ.

42. ಅನಂತರ ಇವರಿಗಾಗಿ ಅದೇ ತರದ ನಾವೆಗಳನ್ನು ಮತ್ತೂ ಸೃಷ್ಟಿಸಿ ದೆವು. ಅವುಗಳ ಮೇಲೆ ಇವರು ಸವಾರಿ ಮಾಡುತ್ತಾರೆ.

وَخَلَقْنَا لَهُم مِّن مِّثْلِهِ مَا يَرْكَبُونَ ٤٢

43. ನಾವಿಚ್ಛಿಸಿದರೆ, ಇವರನ್ನು ಮುಳುಗಿಸಿ ಬಿಡಬಲ್ಲೆವು, ಇವರ ಮೊರೆಯನ್ನು ಕೇಳುವವರಾರೂ ಇರಲಾರರು ಮತ್ತು ಯಾವ ರೀತಿಯಿಂದಲೂ ಇವರು ರಕ್ಷಿಸಲ್ಪಡಲಾರರು.

وَإِن نَّشَأْ نُغْرِقْهُمْ فَلَا صَرِيخَ لَهُمْ
وَلَا هُمْ يُنقَذُونَ ٤٣

44. ಕೇವಲ ನಮ್ಮ ಕೃಪೆ ಮಾತ್ರ ಇವರನ್ನು ಪಾರುಗಾಣಿಸುತ್ತಿದೆ ಮತ್ತು ಒಂದು ನಿರ್ದಿಷ್ಟ ಸಮಯದ ವರೆಗೆ ಜೀವನದ ಸುಖೋಪ ಭೋಗಗಳನ್ನು ಅನುಭವಿಸುವ ಅವಕಾಶ ಕೊಡುತ್ತಿದೆ.

إِلَّا رَحْمَةً مِّنَّا وَمَتَاعًا إِلَىٰ حِينٍ ٤٤

45. ನಿಮ್ಮ ಮುಂದೆ ಬರುತ್ತಿರುವ ಮತ್ತು ನಿಮ್ಮ ಹಿಂದೆ ಗತಿಸಿರುವ ದುರ್ಗತಿಯಿಂದ ತಪ್ಪಿಸಿಕೊಳ್ಳಿರಿ, "ನಿಮ್ಮ ಮೇಲೆ ಕರುಣೆ ತೋರಲ್ಪಡಲೂಬಹುದು" ಎಂದು ಇವರೊಡನೆ ಹೇಳಿದಾಗ, (ಇವರು ಕೇಳಿಯೂ ಕೇಳದಂತೆ ಮಾಡುತ್ತಾರೆ.)

وَإِذَا قِيلَ لَهُمُ اتَّقُوا مَا بَيْنَ أَيْدِيكُمْ
وَمَا خَلْفَكُمْ لَعَلَّكُمْ تُرْحَمُونَ ٤٥

46. ಇವರ ಮುಂದೆ ಇವರ ಪ್ರಭುವಿನ ನಿದರ್ಶನಗಳ ಪೈಕಿ ಯಾವ ನಿದರ್ಶನ ಬಂದರೂ ಇವರು ಅದರ ಕಡೆಗೆ ಗಮನಹರಿಸುವುದಿಲ್ಲ.

وَمَا تَأْتِيهِم مِّنْ آيَةٍ مِّنْ آيَاتِ
رَبِّهِمْ إِلَّا كَانُوا عَنْهَا مُعْرِضِينَ ٤٦

47. ಅಲ್ಲಾಹನು ನಿಮಗೆ ನೀಡಿರುವ ಜೀವನಾಧಾರದಿಂದ ಒಂದಿಷ್ಟನ್ನು ಅಲ್ಲಾಹನ ಮಾರ್ಗದಲ್ಲೂ ಖರ್ಚು ಮಾಡಿರಿ ಎಂದು ಹೇಳಲಾ ದಾಗ, ಈ ಸತ್ಯನಿಷೇಧಿಗಳು ಸತ್ಯವಿಶ್ವಾಸಿಗಳೊಡನೆ- "ಅಲ್ಲಾಹನು ಇಚ್ಛಿಸುತ್ತಿದ್ದರೆ ಸ್ವತಃ ತಾನೇ ಯಾರಿಗೆ ಉಣಿಸುತ್ತಿದ್ದನೋ ಅವರಿಗೆ ನಾವು ಉಣಿಸಬೇಕೇ? ನೀವಂತೂ ಸಂಪೂರ್ಣವಾಗಿ ದಾರಿಗೆಟ್ಟು ಹೋಗಿದ್ದೀರಿ" ಎಂದು ಹೇಳುತ್ತಾರೆ.

وَإِذَا قِيلَ لَهُمْ أَنفِقُوا مِمَّا رَزَقَكُمُ
اللَّهُ قَالَ الَّذِينَ كَفَرُوا لِلَّذِينَ آمَنُوا
أَنُطْعِمُ مَن لَّوْ يَشَاءُ اللَّهُ أَطْعَمَهُ
إِنْ أَنتُمْ إِلَّا فِي ضَلَالٍ مُّبِينٍ ٤٧

48. "(ಪ್ರಳಯ ದಿನದ) ಈ ಬೆದರಿಕೆ ಈಡೇರುವುದಾದರೂ ಯಾವಾಗ? ನೀವು ಸತ್ಯವಂತರಾಗಿದ್ದರೆ ತಿಳಿಸಿರಿ" ಎಂದು ಇವರು ಹೇಳುತ್ತಾರೆ.

وَيَقُولُونَ مَتَىٰ هَٰذَا الْوَعْدُ إِن
كُنتُمْ صَادِقِينَ ٤٨

49. ವಾಸ್ತವದಲ್ಲಿ ಇವರು ಯಾವುದನ್ನು ಕಾಯುತ್ತಿರುವರೋ ಅದೊಂದು ಘನಸ್ಫೋಟವಾಗಿರುತ್ತದೆ. ಅದು- ಇವರು (ತಮ್ಮ ಲೌಕಿಕ ವ್ಯವಹಾರಗಳಲ್ಲಿ) ಜಗಳಾಡುತ್ತಿರುವಾಗ ಹಠಾತ್ತನೆ ಬಂದೆರಗುವುದು.

مَا يَنظُرُونَ إِلَّا صَيْحَةً وَاحِدَةً
تَأْخُذُهُمْ وَهُمْ يَخِصِّمُونَ ٤٩

50. ಆಗ ಇವರಿಗೆ 'ಉಯಿಲು' ಮಾಡಲಿಕ್ಕೂ ಸಾಧ್ಯವಾಗದು ಮತ್ತು ತಮ್ಮ ಮನೆಯವರೆಡೆಗೆ ಮರಳಲಿಕ್ಕೂ ಆಗದು.

فَلَا يَسْتَطِيعُونَ تَوْصِيَةً وَلَا إِلَىٰ
أَهْلِهِمْ يَرْجِعُونَ ٥٠

51. ಅನಂತರ ಒಂದು ಕಹಳೆಯನ್ನೂದಲಾಗುವುದು. ಆಗ ಇವರು ಒಮ್ಮೆಲೆ ತಮ್ಮ ಪ್ರಭುವಿನ ಮುಂದೆ ಹಾಜರಾಗಲಿಕ್ಕಾಗಿ ತಮ್ಮ ಸಮಾಧಿಗಳಿಂದ ಹೊರಟು ಬರುವರು.

وَنُفِخَ فِي الصُّورِ فَإِذَا هُم مِّنَ الْأَجْدَاثِ إِلَىٰ رَبِّهِمْ يَنسِلُونَ ﴿٥١﴾

52. ಅವರು ಭಯಭೀತರಾಗಿ, "ನಮ್ಮನ್ನು ನಮ್ಮ ಶಯನಗೃಹದಿಂದ ಎಬ್ಬಿಸಿದವರಾರು?" ಎಂದು ಕೇಳುವರು. "ಇದು ದಯಾಮಯನಾದ ದೇವನು ವಾಗ್ದಾನ ಮಾಡಿದುದೇ ಆಗಿದೆ ಮತ್ತು ಸಂದೇಶವಾಹಕರ ಮಾತು ಸತ್ಯವಾಗಿತ್ತು.[5]

قَالُوا يَا وَيْلَنَا مَن بَعَثَنَا مِن مَّرْقَدِنَا ۜ هَٰذَا مَا وَعَدَ الرَّحْمَٰنُ وَصَدَقَ الْمُرْسَلُونَ ﴿٥٢﴾

53. ಅದೊಂದು ಘನಸ್ಫೋಟವಾಗಿರುವುದು ಮತ್ತು ಎಲ್ಲರೂ ನಮ್ಮ ಮುಂದೆ ಹಾಜರುಗೊಳಿಸಲ್ಪಡುವರು."

إِن كَانَتْ إِلَّا صَيْحَةً وَاحِدَةً فَإِذَا هُمْ جَمِيعٌ لَّدَيْنَا مُحْضَرُونَ ﴿٥٣﴾

54. ಇಂದು ಯಾರ ಮೇಲೂ ಸ್ವಲ್ಪವೂ ಅನ್ಯಾಯವಾಗದು. ನಿಮಗೆ ನೀವು ಮಾಡುತ್ತಿದ್ದ ಕರ್ಮಗಳಿಗನುಸಾರವಾದ ಪ್ರತಿಫಲವನ್ನೇ ಕೊಡಲಾಗುವುದು.

فَالْيَوْمَ لَا تُظْلَمُ نَفْسٌ شَيْئًا وَلَا تُجْزَوْنَ إِلَّا مَا كُنتُمْ تَعْمَلُونَ ﴿٥٤﴾

55. ಇಂದು ಸ್ವರ್ಗವಾಸಿಗಳು ಸುಖಿಸುವುದರಲ್ಲೇ ತಲ್ಲೀನರಾಗಿದ್ದಾರೆ.

إِنَّ أَصْحَابَ الْجَنَّةِ الْيَوْمَ فِي شُغُلٍ فَاكِهُونَ ﴿٥٥﴾

56. ಅವರೂ ಅವರ ಪತ್ನಿಯರೂ ದಟ್ಟ ನೆರಳುಗಳಲ್ಲಿ ಪೀಠಗಳ ಮೇಲೆ ಒರಗಿಕೊಂಡಿರುವರು.

هُمْ وَأَزْوَاجُهُمْ فِي ظِلَالٍ عَلَى الْأَرَائِكِ مُتَّكِئُونَ ﴿٥٦﴾

57. ಉಣ್ಣಲು, ಕುಡಿಯಲು ಎಲ್ಲ ತರದ ಸ್ವಾದಿಷ್ಟ ವಸ್ತುಗಳು ಅವರಿಗಲ್ಲಿ ಲಭ್ಯವಾಗಿವೆ. ಅವರು ಕೇಳಿದ್ದೆಲ್ಲವೂ ಅವರಿಗಾಗಿ ಸಿದ್ಧವಿದೆ.

لَهُمْ فِيهَا فَاكِهَةٌ وَلَهُم مَّا يَدَّعُونَ ﴿٥٧﴾

58. ಸಲಾಮ್(ಶಾಂತಿ)- ಎಂದು ಕರುಣಾನಿಧಿಯಾದ ಪ್ರಭುವಿನ ಕಡೆಯಿಂದ ಅವರಿಗೆ ಹೇಳಲಾಗಿದೆ.

سَلَامٌ قَوْلًا مِّن رَّبٍّ رَّحِيمٍ ﴿٥٨﴾

59. ಮತ್ತು ಅಪರಾಧಿಗಳೇ, ಇಂದು ನೀವು ಬೇರ್ಪಡಿರಿ.

وَامْتَازُوا الْيَوْمَ أَيُّهَا الْمُجْرِمُونَ ﴿٥٩﴾

60. ಆದಮನ ಮಕ್ಕಳೇ, ನೀವು ಶೈತಾನನ ದಾಸ್ಯ-ಆರಾಧನೆ ಮಾಡಬೇಡಿರಿ, ಅವನು ನಿಮ್ಮ ಪ್ರತ್ಯಕ್ಷ ಶತ್ರು-

أَلَمْ أَعْهَدْ إِلَيْكُمْ يَا بَنِي آدَمَ أَن لَّا تَعْبُدُوا الشَّيْطَانَ ۖ إِنَّهُ لَكُمْ عَدُوٌّ مُّبِينٌ ﴿٦٠﴾

وقف منزل وقف غفران وقف لازم

5. ಈ ಉತ್ತರವನ್ನು ಕೊಡುವವರು ಸತ್ಯವಿಶ್ವಾಸಿಗಳಾಗಿರಲಿಕ್ಕೂ ಸಾಧ್ಯವಿದೆ. ಸ್ವಲ್ಪ ಹೊತ್ತಿನ ನಂತರ, ಇದು ಪ್ರವಾದಿಗಳು ಸೂಚಿಸುತ್ತಿದ್ದ ಆ ದಿನವೇ ಆಗಿದೆ ಎಂದು ಸ್ವತಃ ಅವರೂ ತಿಳಿದುಕೊಳ್ಳಲು ಸಾಧ್ಯವಿದೆ. ಅಂತೆಯೇ ಈ ಉತ್ತರವನ್ನು ಕೊಡುವವರು ದೇವಚರರಾಗಿರಲೂಬಹುದು ಅಥವಾ ನಿರ್ಣಾಯಕ ದಿನದ ಸಮಸ್ತ ವಾತಾವರಣವೇ ಅವರಿಗೆ ಈ ವಿಷಯವನ್ನು ತಿಳಿಸಬಹುದು.

61. ಮತ್ತು ನನ್ನ ದಾಸ್ಯ- ಆರಾಧನೆಯನ್ನೇ ಮಾಡಿರಿ. ಇದು ನೇರ ಮಾರ್ಗವಾಗಿರುತ್ತದೆ ಎಂದು ನಾನು ನಿಮಗೆ ಆದೇಶಿಸಲಿಲ್ಲವೇ?

وَّاَنِ اعْبُدُوْنِیْ ؕ هٰذَا صِرَاطٌ مُّسْتَقِیْمٌ ﴿۶۱﴾ وقف غفران

62. ಆದರೆ, ಇಷ್ಟಾಗಿಯೂ ಅವನು ನಿಮ್ಮ ಪೈಕಿ ಒಂದು ದೊಡ್ಡ ಸಮೂಹವನ್ನು ಪಥಭ್ರಷ್ಟಗೊಳಿಸಿಬಿಟ್ಟನು. ನೀವು ವಿವೇಕವಂತರಾಗಿರಲಿಲ್ಲವೇ?

وَلَقَدْ اَضَلَّ مِنْكُمْ جِبِلًّا كَثِیْرًا ؕ اَفَلَمْ تَكُوْنُوْا تَعْقِلُوْنَ ﴿۶۲﴾

63. ನಿಮಗೆ ಎಚ್ಚರಿಕೆ ನೀಡಲಾಗುತ್ತಿದ್ದ ನರಕವು ಇದುವೇ ಆಗಿದೆ.

هٰذِهٖ جَهَنَّمُ الَّتِیْ كُنْتُمْ تُوْعَدُوْنَ ﴿۶۳﴾

64. ನೀವು ಭೂಲೋಕದಲ್ಲಿ ಮಾಡುತ್ತಿದ್ದ ಸತ್ಯನಿಷೇಧದ ಫಲವಾಗಿ ಈಗ ಇದರ ಇಂಧನವಾಗಿರಿ.

اِصْلَوْهَا الْیَوْمَ بِمَا كُنْتُمْ تَكْفُرُوْنَ ﴿۶۴﴾

65. ಇಂದು ನಾವು ಇವರ ಬಾಯಿಗಳಿಗೆ ಮುದ್ರೆಯನ್ನೊತ್ತಿ ಬಿಡುವೆವು. ಇವರು ಭೂಲೋಕದಲ್ಲಿ ಏನು ಸಂಪಾದಿಸುತ್ತಿದ್ದರೆಂದು ಇವರ ಕೈಗಳು ನಮ್ಮೊಡನೆ ಮಾತಾಡುವುವು ಮತ್ತು ಇವರ ಕಾಲುಗಳು ಸಾಕ್ಷ್ಯ ಹೇಳುವುವು.

اَلْیَوْمَ نَخْتِمُ عَلٰۤی اَفْوَاهِهِمْ وَتُكَلِّمُنَاۤ اَیْدِیْهِمْ وَتَشْهَدُ اَرْجُلُهُمْ بِمَا كَانُوْا یَكْسِبُوْنَ ﴿۶۵﴾

66. ನಾವಿಚ್ಛಿಸಿದರೆ, ಇವರ ಕಣ್ಣುಗಳನ್ನು ಮುಚ್ಚಿ ಬಿಡಬಲ್ಲೆವು, ಅನಂತರ ಇವರು ದಾರಿಯೆಡೆಗೆ ಧಾವಿಸಿ ನೋಡಲಿ. ಇವರಿಗೆ ದಾರಿ ತೋರುವುದೆಲ್ಲಿಂದ?

وَلَوْ نَشَآءُ لَطَمَسْنَا عَلٰۤی اَعْیُنِهِمْ فَاسْتَبَقُوا الصِّرَاطَ فَاَنّٰی یُبْصِرُوْنَ ﴿۶۶﴾

67. ನಾವಿಚ್ಛಿಸಿದರೆ, ಇವರನ್ನು ಮುಂದೆ ನಡೆಯದಂತೆಯೂ ಹಿಂದಕ್ಕೆ ಮರಳದಂತೆಯೂ ಇವರ ಸ್ಥಾನದಲ್ಲೇ ವಿಕೃತಗೊಳಿಸಿ ಬಿಡುವೆವು.

وَلَوْ نَشَآءُ لَمَسَخْنٰهُمْ عَلٰی مَكَانَتِهِمْ فَمَا اسْتَطَاعُوْا مُضِیًّا وَّلَا یَرْجِعُوْنَ ﴿۶۷﴾ ٤ ع ١٧ ٣

68. ನಾವು ಯಾರಿಗೆ ದೀರ್ಘಾಯುಷ್ಯ ನೀಡುತ್ತೇವೋ ಅವನ ಸ್ವರೂಪವನ್ನು ಪಲ್ಲಟಿಸಿಯೇ ಬಿಡುವೆವು. (ಈ ಅವಸ್ಥೆಯನ್ನು ಕಂಡೂ) ಇವರಿಗೆ ಬುದ್ಧಿ ಬರುವುದಿಲ್ಲವೇ?

وَمَنْ نُّعَمِّرْهُ نُنَكِّسْهُ فِی الْخَلْقِ ؕ اَفَلَا یَعْقِلُوْنَ ﴿۶۸﴾

69. ನಾವು ಇವರಿಗೆ (ಈ ಪ್ರವಾದಿಗೆ) ಕಾವ್ಯವನ್ನು ಕಲಿಸಿ ಕೊಡಲಿಲ್ಲ. ಕಾವ್ಯವು ಇವರಿಗೆ ಭೂಷಣವೂ ಅಲ್ಲ. ಇದೊಂದು ಉಪದೇಶ ಮತ್ತು ಸ್ಪಷ್ಟವಾಗಿ ಓದಲ್ಪಡುವ ಗ್ರಂಥವಾಗಿದೆ.

وَمَا عَلَّمْنٰهُ الشِّعْرَ وَمَا یَنْۢبَغِیْ لَهٗ ؕ اِنْ هُوَ اِلَّا ذِكْرٌ وَّقُرْاٰنٌ مُّبِیْنٌ ﴿۶۹﴾

70. ಇದು ಜೀವವುಳ್ಳ ಪ್ರತಿಯೊಬ್ಬನಿಗೆ ಎಚ್ಚರಿಕೆ ನೀಡಲಿಕ್ಕಾಗಿ ಮತ್ತು ನಿರಾಕರಿಸುವವರ ವಿರುದ್ಧ ಸತ್ಯದ ಸಮರ್ಥನೆಗಾಗಿರುತ್ತದೆ.

لِّیُنْذِرَ مَنْ كَانَ حَیًّا وَّیَحِقَّ الْقَوْلُ عَلَی الْكٰفِرِیْنَ ﴿۷۰﴾

71. ನಾವು ನಮ್ಮ ಕೈಗಳಿಂದಲೇ ಮಾಡಿರುವ ವಸ್ತುಗಳ ಪೈಕಿ

اَوَلَمْ یَرَوْا اَنَّا خَلَقْنَا لَهُمْ مِّمَّا عَمِلَتْ

أَيْدِينَآ أَنْعَـٰمًا فَهُمْ لَهَا مَـٰلِكُونَ ﴿٧١﴾

ಇವರಿಗಾಗಿ ಜಾನುವಾರುಗಳನ್ನು ಸೃಷ್ಟಿಸಿರುವುದನ್ನೂ ಈಗ ಇವರು ಅವುಗಳ ಮಾಲಿಕರಾಗಿರುವುದನ್ನೂ ಇವರು ನೋಡುವುದಿಲ್ಲವೇ?

وَذَلَّلْنَـٰهَا لَهُمْ فَمِنْهَا رَكُوبُهُمْ وَمِنْهَا يَأْكُلُونَ ﴿٧٢﴾

72. ನಾವು ಈ ರೀತಿ ಅವುಗಳನ್ನು ಇವರ ಹತೋಟಿಯಲ್ಲಿರಿಸಿದ್ದೇವೆ. ಅವುಗಳಲ್ಲಿ ಕೆಲವದರ ಮೇಲೆ ಇವರು ಸವಾರಿ ಮಾಡುತ್ತಾರೆ. ಇನ್ನು ಕೆಲವದರ ಮಾಂಸ ಇವರು ತಿನ್ನುತ್ತಾರೆ-

وَلَهُمْ فِيهَا مَنَـٰفِعُ وَمَشَارِبُ ۖ أَفَلَا يَشْكُرُونَ ﴿٧٣﴾

73. ಮತ್ತು ಅವುಗಳಲ್ಲಿ ಇವರಿಗಾಗಿ ತರತರದ ಪ್ರಯೋಜನಗಳೂ ಪೇಯಗಳೂ ಇವೆ. ಆದರೂ ಇವರು ಕೃತಜ್ಞರಾಗುವುದಿಲ್ಲವೇ?

وَٱتَّخَذُوا۟ مِن دُونِ ٱللَّهِ ءَالِهَةً لَّعَلَّهُمْ يُنصَرُونَ ﴿٧٤﴾

74. ಇಷ್ಟಾಗಿಯೂ ಇವರು ಅಲ್ಲಾಹನ ಹೊರತು ಇತರರನ್ನೂ ದೇವರುಗಳಾಗಿ ಮಾಡಿಕೊಂಡಿದ್ದು ತಮಗೆ ಸಹಾಯ ಮಾಡಲಾಗುವುದೆಂದು ನಿರೀಕ್ಷಿಸುತ್ತಾರೆ.

لَا يَسْتَطِيعُونَ نَصْرَهُمْ وَهُمْ لَهُمْ جُندٌ مُّحْضَرُونَ ﴿٧٥﴾

75. ಅವರು ಇವರಿಗೆ ಏನೂ ಸಹಾಯ ಮಾಡಲಾರರು. ವಾಸ್ತವದಲ್ಲಿ ಇವರೇ ಅವರ ಪಾಲಿಗೆ ಸದಾ ಸನ್ನದ್ಧ ಸೈನ್ಯವಾಗಿ ಬಿಟ್ಟಿದ್ದಾರೆ.

فَلَا يَحْزُنكَ قَوْلُهُمْ ۘ إِنَّا نَعْلَمُ مَا يُسِرُّونَ وَمَا يُعْلِنُونَ ﴿٧٦﴾

وقف لازم

76. ಸರಿ ಇವರ ಮಾತುಗಳು ನಿಮ್ಮನ್ನು ದುಃಖಕ್ಕೀಡು ಮಾಡದಿರಲಿ. ಇವರು ಅಡಗಿಸುವ ಮತ್ತು ವ್ಯಕ್ತಪಡಿಸುವ ಎಲ್ಲ ವಿಷಯಗಳನ್ನು ನಾವು ಬಲ್ಲೆವು.

أَوَلَمْ يَرَ ٱلْإِنسَـٰنُ أَنَّا خَلَقْنَـٰهُ مِن نُّطْفَةٍ فَإِذَا هُوَ خَصِيمٌ مُّبِينٌ ﴿٧٧﴾

77. ನಾವು ಮಾನವನನ್ನು ವೀರ್ಯಾಣುವಿನಿಂದ ಸೃಷ್ಟಿಸಿರುವುದನ್ನೂ ಅವನು ನೋಡುವುದಿಲ್ಲವೇ? ಮತ್ತೆ ಅವನು ಸ್ಪಷ್ಟ ಜಗಳ ಗಂಟನಾಗಿ ನಿಂತು ಬಿಟ್ಟನು.

وَضَرَبَ لَنَا مَثَلًا وَنَسِىَ خَلْقَهُۥ ۖ قَالَ مَن يُحْىِ ٱلْعِظَـٰمَ وَهِىَ رَمِيمٌ ﴿٧٨﴾

78. ಈಗ ಅವನು ನಮಗೆ ಹೋಲಿಕೆ ಕೊಡುತ್ತಾನೆ ಮತ್ತು ತನ್ನ ಸೃಷ್ಟಿಯನ್ನು ಮರೆತು ಬಿಡುತ್ತಾನೆ. "ಈ ಎಲುಬುಗಳು ಶಿಥಿಲವಾಗಿ ಹೋದ ಬಳಿಕ ಇವುಗಳನ್ನು ಜೀವಂತ ಗೊಳಿಸುವವನಾರು?" ಎಂದು ಕೇಳುತ್ತಾನೆ.

قُلْ يُحْيِيهَا ٱلَّذِىٓ أَنشَأَهَآ أَوَّلَ مَرَّةٍ ۖ وَهُوَ بِكُلِّ خَلْقٍ عَلِيمٌ ﴿٧٩﴾

79. ಇವರೊಡನೆ ಹೇಳಿರಿ, ಇವುಗಳನ್ನು ಪ್ರಥಮ ಬಾರಿ ಸೃಷ್ಟಿಸಿದವನೇ ಪುನಃ ಜೀವಂತ ಗೊಳಿಸುವನು. ಅವನು ಸೃಷ್ಟಿಯ ಪ್ರತಿಯೊಂದು ಕಾರ್ಯವನ್ನೂ ಬಲ್ಲನು.

ٱلَّذِى جَعَلَ لَكُم مِّنَ ٱلشَّجَرِ ٱلْأَخْضَرِ

80. ನಿಮಗಾಗಿ ಹಚ್ಚಹಸಿರಾದ ಮರದಿಂದ ಬೆಂಕಿಯನ್ನುಂಟು

ಮಾಡಿದವನು ಅವನೇ. ನೀವು ಅದರಿಂದ ನಿಮ್ಮ ಒಲೆಗಳನ್ನು ಉರಿಸುತ್ತೀರಿ.

نَارًا فَاِذَآ اَنْتُمْ مِّنْهُ تُوْقِدُوْنَ ۝٨٠

81. ಭೂಮಿ-ಆಕಾಶಗಳನ್ನು ಸೃಷ್ಟಿಸಿದವನು ಇವರಂತಹವರನ್ನು ಸೃಷ್ಟಿಸಲು ಅಶಕ್ತನೇ? ಯಾಕಿಲ್ಲ? ಅವನಂತೂ ಮಹಾ ನಿಪುಣ ಸೃಷ್ಟಿಕರ್ತನಾಗಿದ್ದಾನೆ.

اَوَلَيْسَ الَّذِىْ خَلَقَ السَّمٰوٰتِ وَالْاَرْضَ
بِقٰدِرٍ عَلٰٓى اَنْ يَّخْلُقَ مِثْلَهُمْ ۗ بَلٰى ۗ
وَهُوَ الْخَلّٰقُ الْعَلِيْمُ ۝٨١

وقف غفران

82. ಅವನು ಯಾವುದಾದರೊಂದು ವಿಷಯದ ಸಂಕಲ್ಪ ಮಾಡಿದಾಗ ಅದಕ್ಕೆ 'ಆಗಿ ಬಿಡು' ಎಂಬ ಅಪ್ಪಣೆ ಕೊಡುವುದೇ ತಡ, ಅದು ಆಗಿ ಬಿಡುತ್ತದೆ.

اِنَّمَآ اَمْرُهٗٓ اِذَآ اَرَادَ شَيْـًٔا اَنْ يَّقُوْلَ
لَهٗ كُنْ فَيَكُوْنُ ۝٨٢

83. ಸಕಲ ವಸ್ತುಗಳ ಮೇಲೆ ಸಂಪೂರ್ಣ ಅಧಿಕಾರವಿರುವವನು ಪರಮ ಪಾವನನು ಮತ್ತು ನೀವು ಅವನ ಕಡೆಗೇ ಮರಳಿಸಲ್ಪಡಲಿರುವಿರಿ.

فَسُبْحٰنَ الَّذِىْ بِيَدِهٖ مَلَكُوْتُ كُلِّ
شَىْءٍ وَّاِلَيْهِ تُرْجَعُوْنَ ۝٨٣

ع ٥ ١٤
